ಶ್ರೀ ಬಿ. ಎಸ್. ಯಡಿಯೂರಪ್ಪ : ನಾಳೆಯಾದರೂ ಆಗುತ್ತದೆಯೇ ಸ್ವಾಮಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳಿಗೆ ಮಾನ್ಯ ಸದಸ್ಯರುಗಳು ಹೇಳಿದ ವಿಷಯವನ್ನು ತಿಳಿಸುತ್ತೇನೆ. ಅವರು ನಾಳೆ ಇರುತ್ತಾರೋ ಇಲ್ಲವೋ ಎಂದು ಗೊತ್ತಿಲ್ಲ. ನಾಳೆಯೇ ಕೊಡುತ್ತೇವೆ ಎಂದು ನೀವು ಹೇಳಿದ್ದೀರಿ ಎಂದು ನೀವು ನನ್ನ ಬಗ್ಗೆ ಆಕ್ಷೇಪ ಮಾಡುತ್ತೀರಿ. ಒಂದು ಹೇಳಿಕೆಯನ್ನು ಕೊಡುವಂತೆ ಅವರಿಗೆ ತಿಳಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಮಂತ್ರಿಗಳು ನಾಳೆ ಇರುತ್ತಾರೋ ಇಲ್ಲವೋ ಎಂದು ಹೇಳದಿದ್ದರೆ ನಮಗೆ ಗೊತ್ತಾಗುವುದು ಹೇಗೆ?

ವಿಷಯ : ಮಾಜಿ ಮುಖ್ಯಮಂತ್ರಿಗಳಾದ ವೀರೇಂದ್ರಪಾಟೀಲರ ಮನೆಗೆ ಬೆಂಕಿ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಮಾನ್ಯ ವೀರೇಂದ್ರಪಾಟೀಲರ ಮನೆಗೆ ಬೆಂಕಿ ಒಂದು ಹಚ್ಚುವಂಥ ಘಟನೆ ನಡೆಯಿತು. ಆ ಒಂದು ಘಟನೆ ನಡೆದಾಗ ಪಾಟೀಲರ ಪೋಲೀಸ್ ಮ್ಯಾನ್‌ಗನ್ ಸಹಿತ ಅಲ್ಲಿಯೇ ಇದ್ದರು. ಅವರು ಅಲ್ಲೇ ಇದಾಗ ಈ ರೀತಿಯ ಒಂದು ಬೆಂಕಿ ಹಚ್ಚುವಂಥ ಒಂದು ಘಟನೆ ನಡೆಯಿತು. ನಿಜವಾಗಿಯೂ ಇದು ಯಾರಿಗೂ ಶೋಭೆ ತರುವಂಥದ್ದಲ್ಲ ಎಂದು ನಾನು ತಮ್ಮ ಮುಂದೆ ಹೇಳುತ್ತಿದ್ದೇನೆ. ಏಕೆಂದರೆ ಇವತ್ತಿನ ದಿವಸ ಇದೊಂದು ಸಾಮಾನ್ಯ ಘಟನೆ ಎಂದು ನಾವು ತಿಳಿಯಬಾರದು. ಅವರು ಮುಖ್ಯಮಂತ್ರಿಗಳಾಗಿದ್ದರು. ನಮ್ಮ ರಾಜ್ಯದ ನಾಯಕರು, ಅವರು ಅನಾರೋಗ್ಯದಲ್ಲಿರುವಂಥ ಕಾಲದಲ್ಲಿ ಒಬ್ಬರು ಬಂದು ಬೆಂಕಿ ಹಚ್ಚುತ್ತಾರೆ ಎಂದರೆ, ಇದು ಸರ್ಕಾರದವರು ಅವರಿಗೆ ಯಾವುದೇ ಒಂದು ಸೆಕ್ಯುರಿಟಿ ಕೊಟ್ಟಿಲ್ಲ ಎಂದರೆ, ಇದು ಸರ್ಕಾರಕ್ಕೆ ಶೋಭೆ ತರುವಂಥದಲ್ಲ. ಇದು ಕನ್ನಡ ನಾಡಿಗೂ ಕೂಡ ಶೋಭೆ ತರುವಂಥದ್ದಲ್ಲವೆಂದು ನಾನು ತಮಗೆ ಹೇಳುತ್ತೇನೆ. ಏಕೆಂದರೆ ಇದೇ ರೀತಿ ಬೇರೆಯವರಿಗೆ ಸಹಿತ ಆಗಬಹುದು. ಅದು ಬಹಳ ಮುಖ್ಯ ಇದೆ. ಇವತ್ತಿನ ದಿವಸ ವೀರೇಂದ್ರಪಾಟೀಲರಿಗೆ ಆಯಿತು. ಮತ್ತೆ ನಾಳೆ ಮತ್ತೊಬ್ಬರಿಗೆ ಆಗಬಹುದು. ಇಂಥ ಘಟನೆ ಮುಂದೆ ಆಗಬಾರದು ಎಂದು ನೋಡುವುದು ಸರ್ಕಾರದ ಆದ್ಯ ಕರ್ತವ್ಯ ಎಂದು ತಮ್ಮ ಮುಂದೆ ನಾನು ಹೇಳುತ್ತಿದ್ದೇನೆ. ಏಕೆಂದರೆ ಆತನನ್ನು ಕೋರ್ಟಿನಲ್ಲಿ ಹಾಜರ್ ಮಾಡಿದ್ದಾರೆ. ಜಾಮೀನು ಮೇಲೆ ಬರಬಹುದು. ಜಾಮೀನು ಮೇಲೆ ಬಂದನಂತರ ಮತ್ತೆ ಯಾವುದೇ ರೀತಿಯಲ್ಲಿ ಅಹಿತಕರವಾದಂಥ ಘಟನೆಯಾಗದಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ ಎಂದು ಹೇಳುತ್ತೇನೆ. ನಾನು ಶ್ರೀಮಾನ್ ವೀರೇಂದ್ರಪಾಟೀಲರಿಗೆ ಸೆಕ್ಯುರಿಟಿಯನ್ನು ಕೊಡಬೇಕು ಎಂದು ಹೇಳುತ್ತೇನೆ. ಅವರಿಗೆ ಯಾವುದೇ ರೀತಿಯಿಂದ ಕೂದಲು ಕೊಂಕದ ಹಾಗೆ ಸರ್ಕಾರ ನೋಡಿಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಸರ್ಕಾರದ ಹೈ ಹ್ಯಾಂಡ್‌ನಿಂದ ಇವತ್ತಿನ ದಿವಸ ಇದು ಆಗಿದೆ. ಇದರಲ್ಲಿ ಸರ್ಕಾರದವರು ತಪ್ಪಿದ್ದಾರೆ. ಈ ರೀತಿ ಮುಂದೆ ಆದರೆ ಕನ್ನಡ ನಾಡಿನ ಜನ ಸಹಿಸಲಿಕ್ಕಿಲ್ಲ ಎಂಬ ಮಾತನ್ನು ತಮಗೆ ಹೇಳುತ್ತಿದ್ದೇನೆ.

* ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಅಧ್ಯಕ್ಷರೇ, ಇದು ಯಾವ ಉದ್ದೇಶಕ್ಕೋಸ್ಕರ ಆಯಿತೆಂದು ಪತ್ರಿಕೆಗಳಲ್ಲಿ ನೋಡಿದ್ದೇವೆ. ಯಾರೋ ಒಬ್ಬರು ಕೆಲಸ ಕೇಳುವುದಕ್ಕೆ ಹೋಗಿದ್ದ. ಕೆಲಸ ಸಿಗಲಿಲ್ಲ ಎಂದು ಹೇಳಿ ಈ ರೀತಿ ಕೃತ್ಯ ನಡೆಸಿದ್ದಾನೆ. ಇದರ ಹಿನ್ನೆಲೆ ಏನು, ಇದರ ಹಿಂದೆ

ಇರತಕ್ಕ ಪಿತೂರಿ ಏನು? ಇದು ಗಹನವಾಗಿ ಯೋಚನೆ ಮಾಡತಕ್ಕದ್ದು. ಶ್ರೀಮಾನ್ ವೀರೇಂದ್ರಪಾಟೀಲರು ಕರ್ನಾಟಕದ ಒಬ್ಬ ಧೀಮಂತ ಶಕ್ತಿ. ಇದರಲ್ಲಿ ಎರಡನೆಯ ಅಭಿಪ್ರಾಯ ಇಲ್ಲ. ಶ್ರೀ ವೀರೇಂದ್ರಪಾಟೀಲರ ಮನೆ ಸದಾಶಿವನಗರದಲ್ಲಿದೆ. ಮತ್ತೊಬ್ಬ ಮಾಜಿ ಮುಖ್ಯ ಮಂತ್ರಿ ಶ್ರೀ ರಾಮಕೃಷ್ಣ ಹೆಗಡೆ ಅವರ ಮನೆ ಸದಾಶಿವನಗರದಲ್ಲಿದೆ. ಶ್ರೀಮಾನ್ ಬಿ.ಡಿ ಜತ್ತಿ ಅವರ ಮನೆ ಸದಾಶಿವನಗರದಲ್ಲಿದೆ. ಶ್ರೀಮಾನ್ ಬಂಗಾರಪ್ಪನವರ ಮನೆ ಸದಾಶಿವ ನಗರದಲ್ಲಿದೆ. ಶ್ರೀಮಾನ್ ನಿಜಲಿಂಗಪ್ಪನವರ ಮನೆ ಚಿತ್ರದುರ್ಗದಲ್ಲಿದೆ. ಈ ರೀತಿ ಮಾಜಿ ಮುಖ್ಯಮಂತ್ರಿಗಳ ಮನೆ ಬೇರೆ ಬೇರೆ ಕಡೆ ಇದೆ. ನಾವು ಇದರ ಬಗ್ಗೆ ಪಕ್ಷಾತೀತವಾಗಿ ಮಾತನಾಡಬೇಕಾಗಿದೆ. ಒಬ್ಬ ಮಾಜಿ ಮುಖ್ಯ ಮಂತ್ರಿಗಳ ಮನೆಗೆ ನುಗ್ಗಿ ಬೆಂಕಿ ಹಚ್ಚುವ ಮಟ್ಟಕ್ಕೆ ತಲುಪಿದ ಮೇಲೆ ಸರ್ಕಾರ ಇದೆಯೇ ಎನ್ನುವುದು ನಮ್ಮ ಪ್ರಶ್ನೆ. ಇಲ್ಲಿ ಶಾಂತಿಯನ್ನು ಪಾಲನೆ ಮಾಡತಕ್ಕವರು ಶಾಂತಿಯನ್ನು ಪಾಲನೆ ಮಾಡಿ ಕಾನೂನನ್ನು ರಕ್ಷಣೆ ಮಾಡತಕ್ಕ ಪೋಲೀಸ್ ಇದೆಯೇ? ಪೋಲೀಸ್ ಇಲ್ಲವೆಂದು ನನ್ನ ವಾದ. ಪೋಲೀಸ್ ಇರುವುದೇ ಆಗಿದ್ದರೆ ಪೋಲೀಸರು ನಿಜವಾಗಿ ಇದನ್ನು ಅಷ್ಟು ಸುಲಭವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಯಾರೋ ಒಬ್ಬ ಬಂದು ಬೆಂಕಿ ಹಾಕಿದವನನ್ನು ನ್ಯಾಯಾಲಯಕ್ಕೆ ಕಳಿಸಿದ್ದೇವೆ. ನ್ಯಾಯಾಲಯದಲ್ಲಿ ಅವನ ಮೇಲೆ ಮೊಕದ್ದಮೆ ಹೂಡಿದ್ದೇವೆ ಎಂದರೆ ಆಗುವುದಿಲ್ಲ. ಈ ಸಂದರ್ಭದಲ್ಲಿ ನಿಜವಾಗಿಯೂ ಹೇಳುವುದಾದರೆ ಮಾಜಿ ಮುಖ್ಯಮಂತ್ರಿಗಳ ಮನೆಗೆ ಬೆಂಕಿ ಬಿದ್ದಂತಹ ಒಂದು ವಿಚಾರ ಇದೆಯಲ್ಲಾ ಇದು ಇಡೀ ಸರ್ಕಾರ ತಲೆತಗ್ಗಿಸುವಂತಹ ವಿಚಾರ. ಇನ್ನೂ ಮುಂದೆ ಹೋಗಿ ಹೇಳುವುದಾದರೆ ಸರ್ಕಾರ ರಾಜಿನಾಮೆ ಕೊಡಬೇಕು ಎನ್ನುವ ಮಟ್ಟಕ್ಕೆ ನಾನು ಹೋಗುತ್ತೇನೆ. ಕಾರಣ ಏನು ಎಂದರೆ ಒಬ್ಬ ಮಾಜಿ ಮುಖ್ಯಮಂತ್ರಿಗಳ ಮನೆಗೆ ಇವತ್ತು ಬೆಂಕಿ ಇಡುವ ಮಟ್ಟಕ್ಕೆ ಹೋಗುವುದಾದರೆ ಈ ರಾಜ್ಯದಲ್ಲಿ ಪೋಲೀಸ್ ಇಲಾಖೆಯ ಪರಿಸ್ಥಿತಿ ಏನು? ಪೋಲೀಸರ ವ್ಯವಸ್ಥೆ ಏನು? ಆದ್ದರಿಂದ ಇದಕ್ಕೆ ಯಾರು ಜವಾಬ್ದಾರಿ? ಪೋಲೀಸ್‌ನ ಉನ್ನತ ಅಧಿಕಾರಿಗಳು ಇದರ ಬಗ್ಗೆ ಏನು ಮಾಡುತ್ತಿದ್ದರು? ಇದೇ ರೀತಿ ಶ್ರೀ ವೀರೇಂದ್ರಪಾಟೀಲರಿಗೆ ಕೊಟ್ಟಿರತಕ್ಕ ರಕ್ಷಣೆ ಏನು? ಶ್ರೀ ಬಂಗಾರಪ್ಪನವರಿಗೆ ಕೊಟ್ಟಿರತಕ್ಕ ರಕ್ಷಣೆ ಏನು? ಶ್ರೀ ರಾಮಕೃಷ್ಣ ಹೆಗಡೆಯವರಿಗೆ ಕೊಟ್ಟಿರತಕ್ಕ ರಕ್ಷಣೆ ಏನು? ಶ್ರೀ ನಿಜಲಿಂಗಪ್ಪನವರಿಗೆ ಕೊಟ್ಟಿರತಕ್ಕ ರಕ್ಷಣೆ ಏನು? ಶ್ರೀ ಗುಂಡೂರಾಯರಿಗೆ ಕೊಟ್ಟಿರತಕ್ಕ ರಕ್ಷಣೆ ಏನು? ಎಲ್ಲಾ ಮಾಜಿ ಮುಖ್ಯಮಂತ್ರಿಗಳಿಗೆ ಕೊಟ್ಟಿರತಕ್ಕ ರಕ್ಷಣೆ ಏನು? ಇದು ಸರ್ಕಾರದಿಂದ ತೀರ್ಮಾನ ಆಗಬೇಕು. ಇದರ ಜೊತೆಗೆ ನಮ್ಮಲ್ಲಿ ಅನೇಕ ಮಂತ್ರಿಗಳಿಗೆ ಈಗ ಮನೆಯ ಬೆಂಗಾವಲನ್ನು ಹಿಂದೆ ತೆಗೆದುಕೊಂಡಿದ್ದಾರೆ. ಅವರಿಗೆ ಕೊಟ್ಟಂತಹ ಬೆಂಗಾವಲನ್ನು ಹಿಂದೆ ತೆಗೆದುಕೊಂಡಿದ್ದೀರಿ. ಅವರುಗಳಿಗೆ ಬೆಂಗಾವಲು ಇಲ್ಲ. ಈ ವಿಚಾರದಲ್ಲಿ ಪರ ಅಥವಾ ವಿರೋಧ ಇರಬಹುದು. ಮಂತ್ರಿಗಳು ಅನೇಕ ಕಡೆ ಹೋಗುವಾಗ ಇಂತಹ ಅಚಾತುರ್ಯ ಘಟನೆ ನಡೆದರೆ ಯಾರು ಜವಾಬ್ದಾರಿ? ಯಾವ ಉದ್ದೇಶಕ್ಕೋಸ್ಕರವಾಗಿ ಬೆಂಗಾವಲನ್ನು ತೆಗೆದಿದ್ದೀರಿ? ಇದರ ಬಗ್ಗೆ ಸರ್ಕಾರದ ನಿರ್ಧಾರ ಏನು? ನಿಜವಾಗಿಯೂ ಇದು ಗುರುತರವಾದಂತಹ ಸಮಸ್ಯೆ. ನಾನು ಒಂದು ಮಾತು ಹೇಳುತ್ತೇನೆ. ತಮ್ಮ ಬಗ್ಗೆ ಮಾತನಾಡುತ್ತೇನೆಂದು ತಾವು ತಪ್ಪು ತಿಳಿದುಕೊಳ್ಳಬಾರದು. ತಾವು ಅಧ್ಯಕ್ಷರಾಗಿದ್ದೀರಿ. ತಮಗೂ ಬೆಂಗಾವಲು ಇರುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ತಾವು ಆ ಪೀಠಕ್ಕೆ ಬಂದಾಗ ನಾನು ಹೇಳಿದ್ದೆ. ಮಾನ್ಯ ಮುಖ್ಯಮಂತ್ರಿಯವರಿಗೆ ಕೊಡತಕ್ಕಂಥ ಎಲ್ಲಾ ಬೆಂಗಾವಲು ಸವಲತ್ತನ್ನು ನಾವು ಅಧ್ಯಕ್ಷರಿಗೆ ಕೊಡಬೇಕು ಎಂದು ಈ ಸದನದಲ್ಲಿ ಹೇಳಿದ್ದೆ. ಇವತ್ತು ನನಗೆ ಗೊತ್ತಿರುವ ಹಾಗೆ ನಿಮಗೂ ಬೆಂಗಾವಲು ಇಲ್ಲ. ಈ ಪರಿಸ್ಥಿತಿ ಆಗುವುದಾದರೆ ಇದು ಇಡೀ ಸದನಕ್ಕೆ ಅಗೌರವ ಆಗುತ್ತದೆ. ನಿಮಗೆ ಬೆಂಗಾವಲು ಇಲ್ಲ ಎಂದು ಹೇಳತಕ್ಕದ್ದು ಇದು ಕೇವಲ ನಿಮಗೆ ಇರತಕ್ಕ ರಕ್ಷಣೆಗೂ

ಎಂದಲ್ಲ. ಗೌರವ ಅದು. ಅದನ್ನು ಗೌರವವಾಗಿ ಕೊಡಬೇಕಾದಂತಹುದು ಮತ್ತು ರಕ್ಷಣೆಗೆ ಹೌದು. ಸರ್ಕಾರ ಯಾವ ದಿಕ್ಕಿನಲ್ಲಿ ಯಾವ ರೀತಿಯಲ್ಲಿ ಹೋಗುತ್ತಿದೆ. ಇದು ಬಹಳ ಅತ್ಯಂತ ಗಹನವಾದ ವಿಚಾರ. ಶ್ರೀಮಾನ್ ವೀರೇಂದ್ರಪಾಟೀಲರ ಮನೆಗೆ ಯಾವ ವ್ಯಕ್ತಿ ಬೆಂಕಿ ಹಾಕಿದ್ದಾನೆ ಇದರ ಹಿಂದೆ ಇರತಕ್ಕ ಪಿತೂರಿ ಏನು? ನಡೆದಿರತಕ್ಕ ವಿಷಯ ಏನು ಮತ್ತು ಪೋಲೀಸರ ಬೇಜವಾಬ್ದಾರಿ ಏನು? ಇದಕ್ಕೆ ಯಾರು ಕಾರಣಕರ್ತರು? ಇವರ ಬಗ್ಗೆ ತೀವ್ರವಾಗಿ ಕ್ರಮ ಕೈಗೊಳ್ಳಬೇಕು. ಇದರ ಬಗ್ಗೆ ಒಂದು ನ್ಯಾಯಾಂಗ ತನಿಖೆ ಆಗಬೇಕು ಎನ್ನತಕ್ಕ ಒತ್ತಾಯವನ್ನು ತಮ್ಮ ಮೂಲಕ ಸರ್ಕಾರಕ್ಕೆ ನಾನು ಮಾಡುತ್ತಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಸಭಾಧ್ಯಕ್ಷರೇ, ನಾನು ಭಾಷಣ ಮಾಡುವುದಿಲ್ಲ. ಸರ್ಕಾರದವರು ಇದರ ಬಗ್ಗೆ ಲಘುವಾಗಿ ಪರಿಗಣಿಸದೆ ತಕ್ಷಣ ಕ್ರಮತುರ್ತು ತೆಗೆದುಕೊಳ್ಳುತ್ತಾರೆಂದು ನಾನು ಭಾವಿಸಿದ್ದೇನೆ. ಈ ವಿದ್ಯಮಾನಗಳನ್ನು ನೋಡಿದರೆ ಕಾಂಗ್ರೆಸ್ ಪಾರ್ಟಿಗೆ ಏನಾದರೂ ಗ್ರಹಚಾರ ಬಂದಿದೆ ಏನೋ ಎಂದು ನನಗೆ ಅನಿಸುತ್ತದೆ. ಮಾನ್ಯ ವೀರೇಂದ್ರ ಪಾಟೀಲರ ಮನೆಗೆ ರಕ್ಷಣೆ ಕೊಡುವುದಕ್ಕೆ ಆಗುವುದಿಲ್ಲ. ಯಾರೋ ಹುಬ್ಬಳ್ಳಿಯಲ್ಲಿರತಕ್ಕ ಕಾಂಗ್ರೆಸ್ ಮುಖಂಡರ ಮನೆಗೆ ಬೆಳಿಗ್ಗೆ ಗುಂಡು ಹಾರಿಸಿದ್ದಾರಂತೆ. ಅಂದರೆ ನಿಮ್ಮ ಪಾರ್ಟಿಗೆ ಏನಾದರೂ ಗ್ರಹಚಾರ ಆಗಿದೆಯೇ ಎಂದು ಅಷ್ಟೇ ನಾನು ಕೇಳುವುದು.

ಶ್ರೀ ಬಿ. ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಮಾತು. ನಮಗೆಲ್ಲಾ ಗೊತ್ತಿರುವ ಸಂಗತಿಗಳು; ನಾನು ರಾಜಕಾರಣ ಬೆಳೆಸುವುದಕ್ಕೆ ಇಲ್ಲಿ ಹೋಗುತ್ತಾ ಇಲ್ಲ. ವೀರೇಂದ್ರ ಪಾಟೀಲರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸುವಂತಹ ಸಂದರ್ಭದಲ್ಲಿ ಸಹ ಅನೇಕ ಗಲಭೆಗಳು ಆಯಿತು. ಉದ್ದೇಶಪೂರ್ವಕವಾಗಿ ಕೋಮು ಗಲಭೆ ಆಯಿತು. ಸಾಕಷ್ಟು ಗಂಟಿಗಟ್ಟಲೆ ಚರ್ಚೆ ಆಗಿದೆ. ಈಗ ನಿರ್ದಾಕ್ಷಿಣ್ಯವಾಗಿ ಈ ಸದನದ ಒಳಗಡೆ ಬಂತು ಈ ಸರ್ಕಾರದ ವೈಫಲ್ಯತೆಗಳ ಬಗ್ಗೆ. ಬಿಚ್ಚು ಮನಸ್ಸಿನಿಂದ ಮಾತನಾಡುತ್ತಾ ಇರತಕ್ಕವರಿಗೆ ಅಡ್ಡಿ ಮಾಡುವುದಕ್ಕೋಸ್ಕರ ಏನಾದರೂ ನಿಮ್ಮಲ್ಲಿ ರಾಜಕೀಯ ಗೊಂದಲ ಇರಬೇಕಾದರೆ ಇದರ ಹಿಂದೆ ಶಡ್ಯಂತ್ರ ಇದೆಯೇ? ಏಕೆಂದರೆ ಇಲ್ಲಿ ನಿರ್ಭಯವಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ವೀರೇಂದ್ರಪಾಟೀಲರು ಮಾಜಿ ಮುಖ್ಯಮಂತ್ರಿಗಳು, ಕೆಲಸ ಮಾಡಿರುವಂತಹವರು. ಈ ಸದನದೊಳಗೆ, ನಿರ್ಭೀತಿಯಿಂದ ಯಾವುದಕ್ಕೂ, ಹೆದರದೆ ಕೆಲಸ ಮಾಡುತ್ತಾ ಇರತಕ್ಕವರಿಗೆ, ನಮಗೆ ಭಯಭೀತರಾಗುವಂತಹ ಪ್ರಸಂಗ ಬಂತು. ಕೊಲೆ ಬೆದರಿಕೆ ಬಂತು, ಅದಕ್ಕೋಸ್ಕರ ಪೋಲೀಸ್ ಬೆಂಗಾವಲು ಇದ್ದಾಕ್ಷಣಕ್ಕೆ ನಮಗೆ ರಕ್ಷಣೆ ಸಿಗುತ್ತದೆ ಎಂದು ನಾನು ಹೇಳುವುದಿಲ್ಲ. ನಾನೇನು ಹೇಳುವುದಕ್ಕೆ ಹೊರಟಿದ್ದೇನೆಂದರೆ ಪೋಲೀಸ್ ರಕ್ಷಣೆ ಯಾರಿಗೂ ಇರಬಾರದು. ನಿರ್ಭೀತಿಯಿಂದ ಕೆಲಸ ಮಾಡತಕ್ಕಂಥ ವಾತಾವರಣ ಇರಬೇಕು. ಈ ಸ್ಥಿತಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮಂತ್ರಿಗಳಿಗೆ ಮಾಜಿ ಮಂತ್ರಿಗಳಿಗೆ ರಕ್ಷಣೆ ಕೊಡುವಂತಹ ಸ್ಥಿತಿ ಬಂತು ಅಂದರೆ ಇದನ್ನು ಗಂಭೀರವಾಗಿ ಯೋಜನೆ ಮಾಡಬೇಕು. ಆದರೆ ಅದಲ್ಲ ಈ ಪ್ರಶ್ನೆ. ಪ್ರಶ್ನೆ ಏನೆಂದರೆ ರಾಜಧಾನಿಯಲ್ಲಿ ಮನೆಯ ಹತ್ತಿರ ಹೋಗಿ ಬೆಂಕಿ ಹಚ್ಚುತ್ತೇನೆ, ಬೆಂಗಾವಲಲ್ಲಿ ಇದ್ದಂತವರಿಗೆ ಯಾರೂ ರಕ್ಷಣೆಯನ್ನು ಕೊಡುವುದಿಲ್ಲ. ಸರ್ಕಾರ ಇದರ ಬಗ್ಗೆ ಸರಿಯಾಗಿ ಕ್ರಮ ತೆಗೆದುಕೊಳ್ಳುವುದಿಲ್ಲ ಅಂದರೆ ಮುಂದೆ ಇದು ತುಂಬಾ ಗಂಭೀರವಾಗಿ ಪರಿಣಾಮವಾಗಬಹುದು. ಇವತ್ತು ಅವರ ಮೇಲೆ ಆಗಬಹುದು. ನಮ್ಮ ಮೇಲೆ ಆಗಬಹುದು. ಇನ್ನೊಬ್ಬರ ಮೇಲೆ ಆಗಬಹುದು. ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಿ ಸರಿಯಾದಂತಹ ಕ್ರಮ ತೆಗೆದುಕೊಳ್ಳಬೇಕು. ಆ ಹಿನ್ನೆಲೆ ಏನು? ಕೇವಲ ಸರ್ಕಾರಿ ನೌಕರಿ ಸಿಗಲಿಲ್ಲ ಎನ್ನುವ ಕಾರಣ

ಅಲ್ಲ, ಅದಕ್ಕೆ ಬೇರೆ ಬೇರೆ ಕಾರಣಗಳು ಇರಬಹುದು. ನಿಮ್ಮ ಈ ಕಾಂಗ್ರೆಸ್ಸಿನ ಗೊಂದಲ ಎಲ್ಲಿಗೆ ಹೋಗಿ ಮುಟ್ಟುತ್ತದೆಯೋ ಯಾರ ಮನೆಗೆ ಹೋಗಿ ಬೆಂಕಿಯನ್ನು ಹಚ್ಚುತ್ತೀರೋ ಯಾವ ರೀತಿ ಇದು ಮುಗಿಯುತ್ತದೆಯೋ ನಮಗೆ ಅನುಮಾನ ಬರುತ್ತದೆ. ಅವನನ್ನು ಸರಿಯಾಗಿ ಪೋಲೀಸಿನವರು ಕೇಳಿದ್ದಾರೆಯೇ? ಅವನು ಏತಕ್ಕೆ ಬಂದಿದ್ದ ? ಬೆಂಕಿ ಹಚ್ಚುವ ಹಿನ್ನೆಲೆ ಏನು? ಅದರ ಬಗ್ಗೆ ಸರಿಯಾದಂತಹ ಸ್ಟೇಟ್‌ಮೆಂಟ್ ಮಾಡಿ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಅಲ್ಲಿರುವ ಗನ್‌ಮ್ಯಾನ್‌ನನ್ನು ಸಸ್ಪೆಂಡ್ ಮಾಡಿದ್ದೀರಿ. ಅದು ಪತ್ರಿಕೆಯಲ್ಲಿ ಬಂದಿದೆ ಅದನ್ನು ನೋಡಿದ್ದೇನೆ. ಕೃಷ್ಣಪ್ಪ ಎಂಬುವವನು ತನ್ನ ಮಗಳ ನೌಕರಿಯ ಸಲುವಾಗಿ ಹೋಗುತ್ತಿದ್ದ, ಹಾಗಾಗಿ, ಈ ರೀತಿ ಆಗಿದೆ ಎಂದು ಹೇಳುತ್ತಿದ್ದಾರೆ. ನೌಕರಿಯ ಸಲುವಾಗಿ ಆಗಿದ್ದ ಪ್ರಕರಣ. ಇದರ ಹಿನ್ನೆಲೆ ಏನು ಎಂಬುದನ್ನು ನೋಡಬೇಕಾಗುತ್ತದೆ. ಏಕೆಂದರೆ ಅಲ್ಲಿಗೆ ಒಬ್ಬ ವ್ಯಕ್ತಿ ಹೋಗುತ್ತಾನೆ. ಸೀಮೆಎಣ್ಣೆಯನ್ನು ಹಾಕಿ ಅಲ್ಲಿ ಬೆಂಕಿಯನ್ನು ಹಚ್ಚುತ್ತಾನೆ. ಅಥವಾ ಕಲ್ಲನ್ನು ಹೊಡೆಯುತ್ತಾನೆ. ಏನೂಕ್ರಮ ಆಗುವುದಿಲ್ಲ. ನಂತರ ಸಸ್ಪೆಂಡ್ ಮಾಡುತ್ತಾರೆ. ಇದರಿಂದ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲ. ಹಾಗಾಗಿ ಇದರ ಹಿನ್ನೆಲೆ ಏನು ಇದರ ಬಗ್ಗೆ ಸೂಕ್ತವಾದಂತಹ ತನಿಖೆಯನ್ನು ತಾವು ಮಾಡಬೇಕಾಗುತ್ತದೆ ಮತ್ತು ವಿಶ್ವಾಸ ತೆಗೆದುಕೊಂಡು ಹೇಳಬೇಕಾಗುತ್ತದೆ. ಇದು ಮಾನ್ಯ ವೀರೇಂದ್ರ ಪಾಟೀಲರು ಅಥವಾ ಮತ್ತೊಬ್ಬನ ಪ್ರಶ್ನೆ ಅಲ್ಲ. ಇದೇ ಪ್ರಕಾರ ಸಂರಕ್ಷಣೆ ಈ ರಾಜ್ಯದಲ್ಲಿ ಇದ್ದರೆ ಏನಾಗಬಹುದು. ನಾನು ಮಾನ್ಯ ಮಾಜಿ ಮುಖ್ಯಮಂತ್ರಿಯವರ ಬಗ್ಗೆ ಒಂದು ವಿಚಾರವನ್ನು ತಿಳಿದುಕೊಂಡಿದ್ದೇನೆ. ಮಾಜಿ ಮುಖ್ಯ ಮಂತ್ರಿಗಳಿಗೆ ಸೆಕ್ಯುರಿಟಿಗೋಸ್ಕರ ಗನ್‌ಮ್ಯಾನ್‌ಗಳನ್ನು ಕೊಡುತ್ತೀರಿ, ಆದರಲ್ಲಿಯೂ, ಅವರನ್ನು ವಿತ್‌ಡ್ರಾ ಮಾಡಿಕೊಳ್ಳಬೇಕೆಂಬುದನ್ನು ನಿರ್ಣಯ ಮಾಡುತ್ತೀದ್ದಿರೆಂದು ನಾನು ಕೇಳಿದ್ದೇನೆ. ಮಾನ್ಯ ವಾಟಾಳ್ ನಾಗರಾಜ್‌ರವರು ಮಂತ್ರಿಗಳಿಗೆ ಎಸ್ಕಾರ್ಟ್‌ಅನ್ನು ವಿತ್‌ಡ್ರಾ ಮಾಡಿದ್ದಾರೆಂದು ಹೇಳಿದರು. ಅದು ನಿಮಗೆ ಬಿಟ್ಟಿದ್ದ ಪ್ರಶ್ನೆ. ತಾವು ಏನು ಮಾಡಬೇಕೋ ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳಿ. ನನಗೂ ಸಹ ವಿತ್‌ಡ್ರಾ ಮಾಡಿದ್ದಾರೆ. ನಾನು ಬಜೆಟ್ ಬಗ್ಗೆ ಮಾತನಾಡುವಾಗ ನಿನ್ನೆ ದಿವಸ ಹೇಳಿದೆ. ಇದೊಂದರಲ್ಲಿ ಎಕಾನಮಿಯನ್ನು ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೀದ್ದೀರಿ. ಬೇರೆ ಯಾವುದರಲ್ಲಿಯೂ ಎಕಾನಮಿಯನ್ನು ಮಾಡುತ್ತಿಲ್ಲ. ನಿಮ್ಮ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಹೆಚ್ಚಾಗುತ್ತಿದೆ. ಮಂತ್ರಿಗಳಿಗೆ ಎಸ್ಕಾರ್ಟ್ ಕಡಿಮೆ ಮಾಡುತ್ತೇವೆ. ವಿತ್‌ಡ್ರಾ ಮಾಡುತ್ತೇವೆಂದು ಕಾರಣವನ್ನು ಕೊಟ್ಟಿದ್ದೀರಿ. ಏಕೆಂದರೆ ಎಕಾನಮಿ ಮೇಜರ್ ಅಂತ ಹೇಳುತ್ತೀರಿ. ಎಕಾನಮಿಯನ್ನು ಎಲ್ಲಿ ಮಾಡಬೇಕೋ ಅಲ್ಲಿ ಮಾಡಿ. ಪ್ರಾಧಾನ್ಯತೆಯನ್ನು ಎಲ್ಲಿ ಕೊಡಬೇಕು ಅಲ್ಲಿ ಕೊಡಿ. ಇವತ್ತು ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ವೀರೇಂದ್ರ ಪಾಟೀಲರ ಮನೆಗೆ ಬೆಂಕಿ ಹಾಕಿರುವುದರ ಬಗ್ಗೆ ಸರ್ಕಾರ ಈಗಾಗಲೇ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ನಾವು ಪ್ರಸ್ತಾಪವನ್ನು ಮಾಡುವುದಕ್ಕಿಂತ ಮುಂಚೆಯೇ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ನಮಗಿಂತ ತಮಗೆ ಮುಂಚೆ ಗೊತ್ತಾಗಿದೆ. ಹಾಗಾಗಿ ಏನು ಕ್ರಮ ತೆಗೆದುಕೊಂಡಿದ್ದೀರಿ ಅದನ್ನೂ ಸಹ ಹೇಳಬೇಕು. ಅದರ ಬಗ್ಗೆ ಸ್ಪಷ್ಟವಾದ ಹೇಳಿಕೆಯನ್ನು ಸಹ ಸರ್ಕಾರ ನೀಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಹಿರಿಯ ಮತ್ತು ಗೌರವಾನ್ವಿತ ನಾಯಕರಾದಂತಹ ಮಾನ್ಯ ವೀರೇಂದ್ರ ಪಾಟೀಲರ ಮನೆಯ ಮೇಲೆ ಆಗಿರತಕ್ಕದ್ದು ಅತ್ಯಂತ ಹೇಯವಾದ, ನಿಕೃಷ್ಟವಾದ, ಖಂಡನೀಯವಾದಂತಹ

ಘಟನೆಯಾಗಿದೆ. ಮಾನ್ಯ ಸದಸ್ಯರುಗಳು ವ್ಯಕ್ತಪಡಿಸಿದ ಆತಂಕಗಳ ಜೊತೆಯಲ್ಲಿ ಪೂರ್ಣವಾಗಿ ನಾವು ಭಾಗಿಯಾಗುತ್ತೇವೆ. ಇಂತಹ ಕೃತ್ಯ ರಾಜಕಾರಣದಲ್ಲಿ ಆಗಲೀ ಯಾವುದರಲ್ಲೂ, ಆಗಬಾರದು. ಆದರೆ ಪದೇ ಪದೇ ಆಗುತ್ತಿದೆ. ಇದರ ಮೂಲವನ್ನು ಕಂಡುಹಿಡಿದು ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಅಂಥ ಶಕ್ತಿಗಳ ಮೂಲೋತ್ಪಾಟನ ಮಾಡಬೇಕಾದ ಅಗತ್ಯವಿದೆ. ನಿನ್ನೆ ಇದು ನಡೆದುದು ಗೊತ್ತಾದ ತಕ್ಷಣ ನಮ್ಮ ಡಿ.ಜಿ.ಪಿ. ಆದಿಯಾಗಿ ಎಲ್ಲಾ ಹಿರಿಯ ಪೋಲೀಸ್ ಅಧಿಕಾರಿಗಳು ಅಲ್ಲಿಗೆ ಹೋಗಿ ಏನು ಮಾಡಬೇಕೋ ಎಲ್ಲವನ್ನು ಮಾಡಿದ್ದಾರೆ. ಮುಖ್ಯಮಂತ್ರಿಗಳು ಮತ್ತು ನಾವೆಲ್ಲ ಹೋಗಿ ಅವರ ಕ್ಷೇಮಸಮಾಚಾರವನ್ನು ವಿಚಾರಿಸಿದ್ದೇವೆ. ಏನೇ ಮಾಡಿದ್ದರೂ ಕೂಡ ಯಾವುದೇ ಪಾಪವನ್ನು ಅರಿಯದಂತಹ ಎಲ್ಲಾ ದೃಷ್ಟಿಯಲ್ಲಿಯೂ ಗೌರವ ಇರುವಂತಹ ಮಾನ್ಯ ವೀರೇಂದ್ರ ಪಾಟೀಲರ ಮೇಲೆ ಈ ರೀತಿ ಮಾಡಿದ್ದುದು ಅತ್ಯಂತ ಖಂಡನೀಯವಾಗಿದೆ. ನಮ್ಮ ಮನೆ ಮೇಲೆ ಕಲ್ಲು ಹೊಡೆಯುವುದಕ್ಕೆ ಕಾರಣವಿತ್ತು. ಆದರೆ, ಯಾವುದೇ ಪಾಪವನ್ನು ಅರಿಯದಂಥ ಹಿರಿಯ ನಾಯಕರ ಮನೆಗೆ ಬೆಂಕಿ ಇಟ್ಟಿದ್ದು ಕಂಡು ನನ್ನ ಮನಸ್ಸಿಗೆ ಬಹಳ ಸಂಕಟವಾಯಿತು. ಆ ಸಂದರ್ಭದ ಘಟನೆಯ ಹಿನ್ನೆಲೆ ಕಂಡುಹಿಡಿಯಲು ಎಲ್ಲಾ ಕ್ರಮಗಳನ್ನು ಮತ್ತು ಮುಂದೆ ಈ ರೀತಿಯಾಗದಂತೆ ಸಕಲ ಕ್ರಮಗಳನ್ನು ಸರ್ಕಾರ ಕೈಗೊಳ್ಳುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನೀವು ಬರೀ ಇಷ್ಟು ಹೇಳಿದರೆ ಸಾಕಾಗುವುದಿಲ್ಲ. ಮಾಜಿ ಮುಖ್ಯಮಂತ್ರಿಗಳಿಗೆ ಹಿಂತೆಗೆದುಕೊಂಡಿದ್ದು, ಬೆಂಗಾವಲು ಮತ್ತು ರಕ್ಷಣೆಯನ್ನು ಮತ್ತೆ ಕೊಡತಕ್ಕಂಥಾದ್ದು ಮತ್ತು ಸಭಾಧ್ಯಕ್ಷರಿಗೆ ಹಾಗೂ ವಿರೋಧ ಪಕ್ಷದ ನಾಯಕರಿಗೂ ಸಹ ರಕ್ಷಣೆ ಕೊಡಬೇಕು. ಶ್ರೀಮಾನ್ ವೀರೇಂದ್ರಪಾಟೀಲ್‌ರವರ ಮನೆಯಲ್ಲಾಗಿರತಕ್ಕ ಘಟನೆ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಎಸ್ಕಾರ್ಟ್‌ಅನ್ನು ತೆಗೆದುಹಾಕಬೇಕೆಂದು ಮುಖ್ಯ ಮಂತ್ರಿಗಳು ತೀರ್ಮಾನ ಮಾಡಿಲ್ಲ. ನಮ್ಮಲ್ಲಿರುವ ಅನೇಕ ಮಂತ್ರಿಗಳೇ ನಮಗೆ ಎಸ್ಕಾರ್ಟ್ ಬೇಡವೆಂದು ಹೇಳಿದ್ದರ ಮೇರೆಗೆ ನಿಲ್ಲಿಸಲಾಯಿತು. ಆದರೆ, ಈಗ ಎಸ್ಕಾರ್ಟ್ ಬೇಕೆಂದು ಏನು ಹೇಳಿದ್ದೀರಿ, ಈ ಅಭಿಪ್ರಾಯಕ್ಕೆ ಅನೇಕರು ಬರುತ್ತಿದ್ದಾರೆ. ಆದುದರಿಂದ, The matter will be reconsidered by the Government. ಕಾರಣವೇನೆಂದರೆ, ಅನೇಕ ಜನ ಮಂತ್ರಿಗಳು ಗ್ರಾಮಾಂತರ ಪ್ರದೇಶಗಳಿಗೆ ಹೋದರೆ ದಾರಿ ಗೊತ್ತಾಗುವುದಿಲ್ಲ. ಅಲ್ಲಿ ವಾಹನವನ್ನು ನಿಲ್ಲಿಸಿ ದಾರಿ ಹುಡುಕಿ ಅವರಿವರನ್ನು ಕೇಳಿಕೊಂಡು ಹೋಗಬೇಕಾಗಿದೆ. ಪುನಃ ಎಸ್ಕಾರ್ಟ್ ಕೊಡಬೇಕೆನ್ನುವುದರ ಬಗ್ಗೆ ವಿಚಾರ ನಡೆಯುತ್ತಿದೆ.

ಶ್ರೀ ಆರ್. ವಿ. ದೇಶಪಾಂಡೆ : ನಾನು ಹೇಳುತ್ತಿದ್ದೇನೆ, ಮಾನ್ಯ ಮಂತ್ರಿಗಳಿಗೆ ವಿರೋಧ ಪಕ್ಷದ ನಾಯಕರಿಗೆ ಎಸ್ಕಾರ್ಟ್ ಕೊಡುವುದು, ಬಿಡುವುದು ನಿಮಗೆ ಬಿಟ್ಟಂಥ ಪ್ರಶ್ನೆ. ಆದರೆ, ಸಭಾಧ್ಯಕ್ಷರಿಗೆ ಎಸ್ಕಾರ್ಟ್ ಕೊಡುವ ವಿಚಾರ ಮಾಡಿ. ಇವೊತ್ತಿನಿಂದಲೇ ಎಸ್ಕಾರ್ಟ್ ಕೊಡಬೇಕು. ಮಾನ್ಯ ಅಧ್ಯಕ್ಷರು ತಪ್ಪು ತಿಳಿದುಕೊಳ್ಳಬಾರದು.

ಶ್ರೀ ವಾಟಾಳ್ ನಾಗರಾಜ್ : ಸಭಾಧ್ಯಕ್ಷರಿಗೆ ಬೆಂಗಾವಲು ಕೊಟ್ಟಿದ್ದನ್ನು ಹಿಂತೆಗೆದುಕೊಂಡಿದ್ದುದು ಅಪರಾಧ. ಏಕೆ ಹಿಂತೆಗೆದುಕೊಂಡಿರಿ? ಇದರಿಂದ ಈ ಪೀಠಕ್ಕೆ ಅಗೌರವ ತೋರಿಸಿದಂತಾಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ : ನೀವು ಕೊಟ್ಟಿದ್ದ ಬೆಂಗಾವಲನ್ನು ಏಕೆ ಹಿಂತೆಗೆದುಕೊಂಡಿರಿ ಎಂಬುದಕ್ಕೆ ನಾನು ಕಾರಣ ಹೇಳುತ್ತೇನೆ. ಒಂದು ಕಾರಣ ಆರ್ಥಿಕ ಮಿತವ್ಯಯ ಇರಬಹುದು. ಮತ್ತೊಂದು ಮುಖ್ಯವಾದ ಸಮಸ್ಯೆಯೇನೆಂದರೆ, ಪ್ರತಿಯೊಂದು ಜಿಲ್ಲೆಯಲ್ಲಿ 4-5 ಎಸ್ಕಾರ್ಟ್‌ಗಳಿವೆ. ಆದರೆ, ನಮ್ಮ ಜಿಲ್ಲೆಯಲ್ಲಿ ಒಂದೇ ಎಸ್ಕಾರ್ಟ್ ಇದೆ. ನಿಮ್ಮ ಮಂತ್ರಿಮಂಡಲದಲ್ಲಿ 41 ಜನ ಮಂತ್ರಿಗಳಿದ್ದಾರೆ. ಒಂದು ಜಿಲ್ಲೆಗೆ ಪ್ರವಾಸ ಹೋಗಬೇಕಾದಲ್ಲಿ ಒಂದೇ ಸಲ 5-6 ಮಂತ್ರಿಗಳು ಹೋಗುತ್ತಾರೆ. ಆಗ ಪೋಲೀಸಿನವರು ಏನು ಮಾಡಬೇಕು? ಎಸ್ಕಾರ್ಟ್ ಏನು ಮಾಡಬೇಕು? ಏರ್‌ಬಸ್ ಮಿನಿಸ್ಟ್ರಿ ಆಗಿದೆಯಲ್ಲಾ, ಆ ಕಾರಣಕ್ಕೋಸ್ಕರ ಸ್ಪೀಕರ್‌ಗೆ ಇದ್ದ ಎಸ್ಕಾರ್ಟ್ ತೆಗೆದದ್ದು. ಇದರ ಬಗ್ಗೆ ಮತ್ತೆ ಚಿಂತನೆ ಮಾಡಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾಜಿ ಮುಖ್ಯಮಂತ್ರಿಗಳಿಗೆ ಕೊಟ್ಟಿರತಕ್ಕಂಥ ರಕ್ಷಣೆಯನ್ನು ವಾಪಸ್ಸು ತೆಗೆದುಕೊಳ್ಳುವ ಯೋಚನೆ ಇಲ್ಲ. ನನಗೆ ತಿಳಿದಿರುವಂತೆ ಆ ತರಹ ಯೋಚನೆಯಿದ್ದರೆ ಅದನ್ನು ಕೈಬಿಡುವುದಕ್ಕೆ ಸೂಚನೆ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅವರಿಗೆ ರಕ್ಷಣೆ ಕೊಟ್ಟಿಲ್ಲ. ರಕ್ಷಣೆ ಕೊಡಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಅದರ ಅವಶ್ಯಕತೆ ನನಗೆ ಗೊತ್ತಿದೆ, ನಮ್ಮ ಸರ್ಕಾರಕ್ಕೆ ಹೇಳುತ್ತೇವೆ. ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ, ಇದರಿಂದ ಬೇಜಾರು ಪಟ್ಟುಕೊಳ್ಳಬಾರದು. ಇದು ದುರುದ್ದೇಶದಿಂದ ನಡೆದದ್ದು. ಕಾಂಗ್ರೆಸ್ ಒಳಗಿನ ಜಗಳದಿಂದ ಹೀಗೆಲ್ಲಾ ಆಗುತ್ತಿದೆಯೆನ್ನುವ ಮಾತು ತಮ್ಮಂಥ ಗೌರವಾನ್ವಿತ ನಾಯಕರ ಬಾಯಿಂದ ಬರಬಾರದು. I don't want our friends to pollute the atmosphere. ಒಬ್ಬೊಬ್ಬರು ಹೇಳುತ್ತಾರೆ. ಇದು ಸರಿಯಲ್ಲ, ಇಂತಹ ಮಾತನ್ನು ಆಡಬಾರದು. ಇದಿಷ್ಟೇ ನನ್ನ ವಿನಯಪೂರ್ವಕವಾದ ಬೇಡಿಕೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಪರಿಸ್ಥಿತಿ ನೋಡಿದಾಗ ಈ ತರಹದ ಅನುಮಾನಕ್ಕೆ ಆಸ್ಪದವಾಗುತ್ತಿದೆ. ಈ ಗೊಂದಲ, ಗಡಿಬಿಡಿ, ಹೊಡೆದಾಟ, ಬಡಿದಾಟ .....

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಕೂಗಾಡುವುದು ಉತ್ತರವಲ್ಲ, ವಾದವಲ್ಲ.

ಶ್ರೀ ವಾಟಾಳ್ ನಾಗರಾಜ್ : ಈ ಹಿಂದೆ ನೇರವಾಗಿ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರ ಮನೆ ಮೇಲೆ ದಾಳಿ ನಡೆದಿದೆ, ರಂಗನಾಥರವರ ಮನೆ ಮೇಲೆ ದಾಳಿ ನಡೆದಿದೆ. ಆಗ ರಕ್ಷಣೆ ಕೊಟ್ಟರೆ? ಏಕೆ ರಕ್ಷಣೆ ಕೊಡಲಿಲ್ಲ? ನಿಮಗೆ ರಕ್ಷಣೆ ಸಿಕ್ಕಿತೇ? ಹೇಳಿ..

ಶ್ರೀ ಬಿ. ಎಸ್. ಯಡಿಯೂರಪ್ಪ : ಮಂತ್ರಿಮಂಡಲದ ವಿಶ್ವಾಸ ಬೇಕೆಂದು ನಾವು ನಿಮ್ಮನ್ನು ಕೇಳಿದ್ದೇವೆಯೇ? ಮುಖ್ಯಮಂತ್ರಿಗಳೇ ಕರೆದು ಮಂತ್ರಿಮಂಡಲದ ವಿಶ್ವಾಸ ಇದೆಯೇ? ಇಲ್ಲವೇ? ಎಂದು ಕೇಳುವಂಥ ಪರಿಸ್ಥಿತಿ ಬಂದಿದೆ. ಹಿಂದೆ ಮಾನ್ಯ ರಂಗನಾಥ್‌ರವರ ಮನೆ ಮೇಲೆ ಕಲ್ಲು ತೂರಿದರು, ಈಗ ವೀರೇಂದ್ರ ಪಾಟೀಲರ ಮನೆಗೆ ಬೆಂಕಿ ಇಟ್ಟಿದ್ದಾರೆ, ತಮ್ಮ ಮನೆ

ಮೇಲೂ ದಾಳಿ ನಡೆಯಿತೆಂದು ಹಾರ್ನಳ್ಳಿ ರಾಮಸ್ವಾಮಿಯವರು ಹೇಳಿದರು. ನಿಮಗೆ ಭದ್ರತೆ ಅಗೌರವ ತೋರಿಸಿದಂತಾಗುತ್ತದೆ.

ನಿಲುವಳಿ ಸೂಚನೆಯ ಬಗ್ಗೆ ಪ್ರಸ್ತಾಪ

ಭೀಕರ ಬರಗಾಲದಿಂದಾಗಿ ರೈತರಿಗೆ ತೊಂದರೆ.

* ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಎಸ್.ಜೆ.ಪಿ. , ಬಿ.ಜೆ.ಪಿ. ಹಾಗೂ ವಾಟಾಳ್ ನಾಗರಾಜ್‌ರವರು ಸೇರಿ ರೈತರ ವಿಚಾರವಾಗಿ ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿದ್ದೆವು. ರಾಜ್ಯದಲ್ಲಿ ರೈತರು ಬಹಳ ಕಷ್ಟದಲ್ಲಿದ್ದಾರೆ. ಭೀಕರ ಬರಗಾಲ ಬಂದಿರುವುದಲ್ಲದೆ ಇತ್ತೀಚೆಗುಂಟಾದ ನೆರೆ ಹಾವಳಿಯಿಂದ ವಿದ್ಯುಚ್ಛಕ್ತಿ ಸರಬರಾಜು ಸರಿಯಿಲ್ಲ.

12.20 ಪಿ.ಎಂ.

ಇವತ್ತು ಏನು ಬೆಳೆ ರೈತರ ಕೈಗೆ ಬಂದಿದೆ ಅದಕ್ಕೆ ಸಹ ಸರಿಯಾದ ಬೆಲೆ ಇಲ್ಲ, ಬೆಲೆಗಳೆಲ್ಲಾ ಕುಸಿದು ಬಿದ್ದಿದೆ. ಸರ್ಕಾರ ಇವತ್ತು ಮುಂಗಡ ಪತ್ರದಲ್ಲಿ ರೈತರಿಗೆ ಏನೇನೂ ಕೊಟ್ಟಿಲ್ಲ. ಆದುದರಿಂದ ಸರ್ಕಾರದ ಮೇಲೆ ಒತ್ತಾಯ ತರುತ್ತಿದ್ದೇನೆ, ಕಡೆಯ ಪಕ್ಷ ಮಾನ್ಯ ರಾಮಕೃಷ್ಣ ಹೆಗಡೆಯವರು ಇದ್ದಾಗ, ಜನಪರ ಸರ್ಕಾರವಿದ್ದಾಗ one time operation 6-8 ಸಲ ಸಮಯ ಕೊಟ್ಟು ಬಡ್ಡಿ ರಿಯಾಯಿತಿ, ದಂಡದ ಬಡ್ಡಿ ರಿಯಾಯಿತಿಯನ್ನು ಕೊಟ್ಟರೋ ಅದರ ಪ್ರಕಾರ ಒಂದು ರಿಯಾಯಿತಿಯನ್ನು ಸರ್ಕಾರದವರು ಕೊಡಬೇಕೆಂದು ನಾನು ನಿಲುವಳಿ ಸೂಚನೆಯನ್ನು ಮೂವ್ ಮಾಡಿದ್ದೇನೆ. ಅದರ ಬಗ್ಗೆ ತಮ್ಮ ಕಛೇರಿಯಿಂದ ಒಂದು ಪತ್ರ ಬಂದಿದೆ, ಅದರಲ್ಲಿ ಇದರ ಬಗ್ಗೆ ಬಜೆಟ್‌ನಲ್ಲಿ ಮಾತನಾಡಿ ಎಂದು ಹೇಳಿದೆ. ತಮ್ಮ ಗಮನಕ್ಕೆ ತರುವುದೇನೆಂದರೆ ನಮಗೆ ಸದನದ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಇಚ್ಛೆ ಇಲ್ಲ. ಆದರೆ, ಈ ವಿಷಯ ಬಹಳ ಗಂಭೀರವಾದುದು, ರಾಜ್ಯದ ರೈತರು ರಾಜ್ಯದ ಇತಿಹಾಸದಲ್ಲಿ ಎಂದೆಂದೂ ಇರದಂಥ ಕಷ್ಟದಲ್ಲಿ ಇಂದು ಇದ್ದಾರೆ. ನೆರೆಹಾವಳಿ ಒಂದು ಕಡೆಯಾದರೆ ಬರಗಾಲ ಮತ್ತೊಂದು ಕಡೆ. ಜೋಳ, ಗೋಧಿ, ಭತ್ತ, ಹತ್ತಿ ಎಲ್ಲವುಗಳೂ ಸಹ ಕೊಲ್ಯಾಪ್ಸ್ ಆಗಿದೆ. ತಾವು ರೈತರ ಕುಟುಂಬದಿಂದ ಬಂದಿದ್ದೀರಿ, ತಮಗೂ ಸಹ ಅದು ಗೊತ್ತು. ಇಂಥ ಪರಿಸ್ಥಿತಿಯಲ್ಲಿ ಇದನ್ನು ಬಜೆಟ್‌ನಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ, ಇದು ಒಂದು ಸ್ಪೆಸಿಫಿಕ್ ಇಷ್ಯೂ ಬಗ್ಗೆ ಬಜೆಟ್‌ನಲ್ಲಿ ಮಾತನಾಡುವುದರಿಂದ ನಮಗೇನೂ ಲಾಭವಾಗುವುದಿಲ್ಲ. ನಾವು ಕೆಲವು ವಿಚಾರಗಳನ್ನು ಹೇಳಬೇಕು. ಅದನ್ನು ಹೇಳಿದ್ದೇವೆ, ಸರ್ಕಾರ ಕೂಡ ಇದರ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕು, ನಾವು ವಿವರಕ್ಕೆ ಹೋಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾವು ಏನು ನಿಲುವಳಿ ಸೂಚನೆಯನ್ನು ತಂದಿದ್ದೇವೆ ಅದನ್ನೂ ಕೂಡ ಸ್ವಲ್ಪ ನೋಡಬೇಕಾಗುತ್ತದೆ.